ಕೇಳಿದರೆ, 'ಜ್ವರ ತಲೆಗೇರಿ ಬಿಟ್ಟರೆ ಮಗುವಿಗೆ' ಇಲ್ಲ ಭೇದಿ ನಿಲ್ತಾ ಇಲ್ಲ' ಹೀಗೆ ಒಂದಲ್ಲ ಒಂದು... ಅದರಲ್ಲಿ ಸತ್ಯವೂ ಇದ್ದಿರ ಬಹುದು. ಸಸಾರಕ್ಕೆ ನಕ್ಕರೆ ಸದಾ ಇರಲಿ ಅನ್ನೋದು ನಮ್ಮ ಜನ್ಮಸಿದ್ಧ ಹಕ್ಕು.

ಇಂಥಾ ಒಂದು ಗಳಿಗೆಯಲ್ಲಿ ಅಪ್ಪನೆಂಬ ಅಪ್ಪ ಅವಳ ಮನೆಗೆ ತಾಕಿದ. ಅವಳು ಅಸ್ತವ್ಯಸ್ತ ಬಟ್ಟೆಯೊಂದಿಗೆ ಬಾಗಿಲು ತೆರೆದಿರಬೇಕು. ಈತ ಥೇರ್ಮನ್. ಸಾಲದೇ. ಕೊನೆ ಕೊನೆಗೆ ಅದು ಎಷ್ಟರ ಮಟ್ಟಿಗೆ ಬಂತೆಂದರೆ ಆಕೆಯೇ ನಮ್ಮ ಮನೆಗೆ ಬರತೊಡಗಿದಳಂತೆ... ಇನ್ನು ಅಮ್ಮನ... ಹೂಸು ಬುಡುಕಿ ಅಮ್ಮನ ಗತಿ ದೇವರೇ ಗತಿ. ಮನೆಯಲ್ಲೇ ಕುಡಿತ, ಕುಣಿತ. ಅಮ್ಮ ಸೋತು ಸುಣ್ಣವಾದಳು.

ನನ್ನ ಓದು ಮುಗಿಯುತ್ತಿತ್ತು. ಹೇಳಿದೆನಲ್ಲ ಕಾಲ ಹೋಗುವುದಿಲ್ಲ–ಹಾರುತ್ತದೆ. ಇನ್ನೆರಡು ತಿಂಗಳಲ್ಲಿ ಎಂ.ಎ. ಮುಗಿಯುತ್ತಿತ್ತು. ನನ್ನ ಒಂದೇ ಕನಸು ಅಪ್ಪನನ್ನು ಸರಿ ಮಾಡುವುದಲ್ಲ– ಆತನನ್ನು ಕಂಡರೇ ಹೆದರಿಕೆಯಾಗುತ್ತಿತ್ತು. ಅವನ ಕಣ್ಣುಗಳು ಸದಾ ಕೆಂಪಗೆ ಉರಿಯುತ್ತಿದ್ದವು. ಆತ ಕಣ್ಣು ಬಿಟ್ಟ ಎಂದರೆ ನನ್ನ ಎದೆ ಪುಕುಪುಕು ಎನ್ನುತ್ತಿತ್ತು. ಆತ ಗಟ್ಟಿಯಾಗಿ 'ಲೇ ಚಂದ್ರ' ಎಂದರೆ ಸಾಕು ನನ್ನ ಚಡ್ಡಿಯಲ್ಲಿ ಒಂದ ಪ್ರವಿಸುತ್ತಿತ್ತು. ಇದ್ದ ಒಂದೇ ಆಸೆ ಎಂದರೆ ಅಮ್ಮನನ್ನು ನಗರಕ್ಕೆ ಕರೆಸಿಕೊಂಡು ಜಟಕಾ ಗಾಡಿಯಲ್ಲಿ ಮೈಸೂರು ಎಲ್ಲಾ ತೋರಿಸಬೇಕು... 'ಇಂದ್ರ ಭವನ'ದಲ್ಲಿ ಜಾಮೂನು, ಮಸಾಲೆ ದೋಸೆ ಕೊಡಿಸಬೇಕು...

ಅಷ್ಟರಲ್ಲಿ ಇದು ಸಂಭವಿಸಿತು.

ಆಗಬಾರದ್ದು ಆಯಿತು.

ಮೈಸೂರಿಗೆ ಊರಿನವನೊಬ್ಬ ವರ್ತಮಾನ ತಂದ– 'ಅಮ್ಮ ಸತ್ತು ಹೋದಳು'. ನಾನು ಓಡಿದೆ. ಮನೆಯ ಜಗುಲಿಯಲ್ಲಿ ಅಮ್ಮನನ್ನು ಮಲಗಿಸಿದ್ದರು. ಮೇಲೊಂದು ಬಿಳಿಬಟ್ಟೆ. ಅಪ್ಪ ಮೂಲೆಯಲ್ಲಿ ಆಕಾಶದತ್ತ ನೋಡುತ್ತ ನಿಂತಿದ್ದ... ನಾನು ಅಮ್ಮನ ಹತ್ತಿರ ಹೋದಾಗ ಶವದ ಮೇಲಿನ ಬಿಳಿ ಹೊದಿಕೆ ತೆಗೆದರು. ನಾನು ನೋಡುತ್ತಾ ನಿಂತೆ. ತಲೆಯ ಹತ್ತಿರ ಏನೋ ಗಾಯದಂತಿತ್ತು. ಜೀವವೇ ಹೋದ ಮೇಲೆ ಬಾಕಿ ಸಂಗತಿ ತಗಂಡು ಏನು ಮಾಡಲಿ. ಮಣ್ಣು ಮಾಡಿದ ಮರು ದಿನ ನಾನು ಹೊರಟೆ. ಊರಿನವ ಒಬ್ಬ ನನ್ನ ಜೊತೆಗೆ ಬಸ್‌ಸ್ಟಾಂಡ್‌ಗೆ ಬಂದ... 'ಚಂದ್ರಪ್ಪ, ಜನ ಹೇಳ್ತಾರೆ. ಈ ಮಿಡ್‌ವೈಫ್ ಮನೆಗೆ ಬಂದಾಗ ಏನೋ ಜಗಳ ಆಯ್ತಂತೆ. ಆ ದಡೂತಿ ಹೆಣ್ಣು ಪೀಕಲು ನಿನ್ನ ತಾಯಿಯನ್ನು ದೂಕಿದ ರಭಸಕ್ಕೆ ಒರಳು ಕಲ್ಲು ತಾಗಿ ಅಲ್ಲೇ ಜೀವ ಬಿಟ್ಟಳಂತೆ... ಜನ ಹೇಳ್ತಾರೆ. ನಾನು ನೋಡಿಲ್ಲ' ಆತ ಹೇಳಿದಾಗ ನನ್ನ ನರನರಗಳಿಗೆ ಬೆಂಕಿ ಹೊತ್ತಿ ಕೊಂಡಿತು. ಅವಳ ಮನೆ ದೂರವಿರಲಿಲ್ಲ. ಬಸ್‌ಸ್ಟಾಪ್ ಹತ್ತಿರಾನೇ ಇತ್ತು. ಅವನನ್ನು ಎಳೆದುಕೊಂಡು ಹೋದೆ. 'ತೋರಿಸಿ ಸಾಕು ಅವಳನ್ನು ನಾನು ನೋಡಬೇಕು' ಎಂದೆ. ಅಲ್ಲೇ ಹತ್ತಿರದ ಅವಳ ಮನೆಗೆ ಹೋದೆ. ಬಾಗಿಲು ತೆಗೆದಳು... 'ಯಾರಿಗೆ ರೋಗ?' ಎಂದಳು. ನನ್ನ ಕೋಪ ನೆತ್ತಿಗೇರಿತ್ತು... 'ನಿನಗೇ ರೋಗ. ನೀನೆ ಮನೆಹಾಳಿ. ನೀನೇ ರೋಗಿ' ಎಂದು ಹೇಳಿದವನೇ ನಾನು ಮುಂದಕ್ಕೆ ಹೋಗಿ ಅವಳ ತುರುಬು ಹಿಡಿದು ನಾಲ್ಕಾರು ಏಟು ಕೊಟ್ಟೆ. ಅವಳು ತತ್ತರಿಸಿ ಹೋದಳು. 'ಹೆಲ್ಪ್ ಹೆಲ್ಪ್' ಎಂದು ಕೂಗುತ್ತಾ ಓಡಿದಳು.

ನಾನು ಸೀದಾ ಬಸ್ಸು ಹಿಡಿದು ಮೈಸೂರಿಗೆ ಬಂದೆ. ಕೋರ್ಸು ಮುಗಿದು, ಪರೀಕ್ಷೆ ಮುಗಿಯಿತು. ಊರಿಗೆ ಮತ್ತೆ ಹೋಗಲಿಲ್ಲ. ಊರಲ್ಲಿ ಇರುವವರು ಯಾರು. ಅಮ್ಮನಿದ್ದರೆ ತವರು ಎನ್ನೋ ಹಾಗೆ. ಅಪ್ಪ ಮನೆಯಲ್ಲಿ ಅಳುತ್ತಾ ಕುಡಿಯುತ್ತಾ ಇರುತ್ತಾನಂತೆ. ಯಾವುದೋ ಹೋಟೆಲ್‌ನಲ್ಲಿ ತಿನ್ನುತ್ತಾನೆ... ತಿಂದರೂ ತಿನ್ನಲಿ, ಬಿಡಲಿ.

ಕೆಲವು ತಿಂಗಳು 'ಇಂದ್ರವಿಹಾರ'ದಲ್ಲಿ ಕ್ಯಾಷಿಯರ್ ಕೆಲಸಕ್ಕೆ ಸೇರಿದೆ. ಒಂದೆರೆಡು ಇಂಟರ್‌ವ್ಯೂ ಮುಗಿದಾದ ಮೇಲೆ ಕೆಲಸ ಸಿಕ್ಕಿತು. ಕಾಲೇಜು ಅಧ್ಯಾಪಕನಾಗಿಬಿಟ್ಟೆ.